

ಸಹಾಯವಾಗುವ ಆಟಿಕೆಗಳೇ ಬೇಕೆಂಬುದು ಅವಳ ಇಚ್ಛೆಯಾಗಿತ್ತು. ಆದ್ದರಿಂದ ಅಕ್ಷರ ಕಲಿಯುವ ಸಲಕರಣೆಗಳು, ಸೇತುವೆ, ಗಾಡಿಗಳನ್ನು ನಿರ್ಮಿಸಲು ಬೇಕಾದ ಮೆಕಾನೊ ಸೆಟ್ ಮುಂತಾದವುಗಳನ್ನು ಲೀಲಾ ಕೊಂಡು ತಂದಿದ್ದಾಳೆ" ಮೇನೋನ್ ಕೊಂಚ ಅಭಿಮಾನದಿಂದಲೇ ಹೇಳಿಕೊಂಡ.

ಮದರ್ ಪುನಃ ಕಸೂತಿ ಹೆಣೆದ ಟವಲಿನಿಂದ ಮುಖದಲ್ಲಿ ಮೂಡಿದ ಬೆವರನ್ನು ಒರೆಸಿಕೊಂಡರು.

'ಮದರ್ ತಪ್ಪು ತಿಳಿಯಬೇಡಿ, ತೀರಿಹೋದ ಅಮ್ಮನ ಕುರಿತು ನೆನಪಿಸಬಾರದೆಂದು ನಮ್ಮಿಬ್ಬರ ಅಭಿಪ್ರಾಯ. ಎಷ್ಟು ಬೇಗನೆ ಮಗು ಅಮ್ಮನನ್ನು ಮರೆಯುತ್ತಾನೋ ಅಷ್ಟು ಬೇಗನೆ ಅವನಿಗೆ ನೆಮ್ಮದಿ ದೊರೆಯುತ್ತದೆ' ಮೇನೋನ್ ಹೇಳಿದ.

'ನಿಮ್ಮ ಅಭಿಪ್ರಾಯದೊಂದಿಗೆ ನಾನಷ್ಟೇ ಅಲ್ಲ ಇಲ್ಲಿ ಉಳಿದ ಕ್ರೈಸ್ತ ಸನ್ಯಾಸಿಯರು ಸಹಮತ ವ್ಯಕ್ತಪಡಿಸಲಾರರು. ಹರಿದುಹೋದ ಒಂದು ಅಂಗಿಯ ಬದಲು ಹೊಸ ಅಂಗಿ ತಂದುಕೊಡುವಷ್ಟು ಸುಲಭವಲ್ಲ ತೀರಿಕೊಂಡ ಅಮ್ಮನಿಗೆ ಬದಲಿ ಮತ್ತೊಂದು ತಾಯಿಯನ್ನು ಕರೆದುಕೊಂಡು ಬಂದು ಕೊಡುವುದು' ಮದರ್ ಹೇಳಿದರು.

'ಮೋಹನನಿಗೋಸ್ಕರವೇ ನಾನಿಷ್ಟು ಆತುರದಿಂದ ಪುನರ್ ವಿವಾಹವಾಗಿದ್ದು ಮದರ್. ಅವನಿಗೆ ಮಾರ್ಗದರ್ಶಿಯಾಗಿಯೂ ಒಬ್ಬ ಅಮ್ಮನ ಅಗತ್ಯವಿದೆಯೆಂದು ನನಗನಿಸಿತು' ಮೇನೋನ್ ಹೇಳಿದ.

'ಮೋಹನನ್ನು ನೀವು ಇನ್ನು ಮುಂದೆ ಮನೆಯಲ್ಲಿರಿಸಿ ಕಲಿಸ್ತೀರಾ? ಹಾಗಾದರೆ ಖಂಡಿತವಾಗಿಯೂ ಅವನಿಗೆ ಭಾವನಾತ್ಮಕವಾದ ಒಂದು ಸುರಕ್ಷತೆ ಅನುಭವವಾಗುತ್ತದೆ' ಮದರ್ ಹೇಳಿದರು.

'ಈಗಲೇ ಅವನನ್ನು ಮನೆಗೆ ಕರೆದುಕೊಂಡು ಹೋಗಲು ನಮಗೆ ಸಾಧ್ಯವಿಲ್ಲ. ಲೀಲಾಳಿಗೆ ಈ ತಿಂಗಳ ಪರೀಕ್ಷೆಯ ಉತ್ತರ ಪತ್ರಿಕೆಗಳ ಮೌಲ್ಯಮಾಪನ ಮಾಡಬೇಕಾಗಿದೆ. ಅವಳಿಗೆ ಪುರುಸೊತ್ತೆ ಸಿಗಲಾರದು. ಒಂದೆರಡು ವರ್ಷಗಳು ಅವನು ಬೋರ್ಡಿಂಗ್‌ನಲ್ಲೇ ಇರಲಿ. ಅನಂತರ ಅವನನ್ನು ಮನೆಯಲ್ಲಿರಿಸಿ ಓದಿಸ್ತಿವಿ' ಮೇನೋನ್ ಹೇಳಿದ.

ಮೇರಿಯೆಂಬ ಅನಾಥ ಬಾಲಕಿ ಒಂದು ಮರದ ಟ್ರೇನಲ್ಲಿ ಎರಡು ಚಹಾದ ಕಪ್ಪುಗಳು ಒಂದು ಚಹಾದ ಗಿಂಡಿ ಮತ್ತು ಎರಡು ತುಣುಕು ಕೇಕುಗಳನ್ನು ಇರಿಸಿದ ತಟ್ಟೆಯೊಂದಿಗೆ ನಡೆದು ಬಂದಳು.

'ಆ ಮೇಜಿನ ಮೇಲಿಡು' ಮದರ್ ಹೇಳಿದರು.

'ಈ ಕೇಕು ಇಲ್ಲೇ ತಯಾರಿಸಿದ್ದಾ? ಬ್ಲಾಕ್ ಫಾರೆಸ್ಟ್